## ಫ್ಲಿಪ್‌ಕಾರ್ಟ್ ಇಮೇಜ್ ಸರ್ಚ್

ನಿಮ್ಮ ಸ್ನೇಹಿತೆಯ ಉಡುಗೆಯ ಮೇಲೆ ಅಥವಾ ಆಕೆ ಹಾಕಿಕೊಂಡಿರುವ ಆಭರಣದ ಮೇಲೆ ಮನಸ್ಸಾಗಿದೆಯಾ? ಅದನ್ನು ಗಂಟೆಗಟ್ಟಲೆ ವ್ಯಯಿಸಿ ಹುಡುಕಬೇಕಾಗಿಲ್ಲ. ಅಂಥದ್ದನ್ನೇ ನಿಮ್ಮ ನೆಚ್ಚಿನ ಇ- ಕಾಮರ್ಸ್ ಪೋರ್ಟಲ್‌ನಲ್ಲಿ ಖರೀದಿಸುವುದು ಈಗ ಸುಲಭ. ಆ ಉಡುಪು ಅಥವಾ ಒಡವೆ ಅಥವಾ ಬ್ಯಾಗ್, ಚಪ್ಪಲಿಯ ಚಿತ್ರ ತೆಗೆದು ಫ್ಲಿಪ್‌ಕಾರ್ಟ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಿ. ಈಗ ಅದೇ ತರಹ ಇರುವ ಗ್ರಾಹಕ ವಸ್ತುಗಳನ್ನು ಹುಡುಕುವುದು ಸುಲಭ. ಬಣ್ಣ, ವಿನ್ಯಾಸ, ಸ್ಟೈಲ್ ಆಧಾರದ ಮೇಲೆ ನಿಮ್ಮ ಹುಡುಕಾಟ ಸುಲಭವಾಗುತ್ತದೆ. ನೀವು ಕೀವರ್ಡ್ ಹೊಡೆಯಬೇಕಾಗಿಲ್ಲ, ಫಿಲ್ಟರ್ ಮಾಡಬೇಕಾಗಿಲ್ಲ.







## ಆ್ಯಪಲ್ ನ್ಯೂಸ್

ಕ್ಷಣ ಕ್ಷಣಕ್ಕೂ ತಾಜಾ ಸುದ್ದಿಯ ಮೇಲೆ ಕಣ್ಣಾಡಿಸುವವರ ಸಂಖ್ಯೆ ಜಾಸ್ತಿಯಾಗಿದೆ. ಈ ಮೊಬೈಲ್ ಯುಗದಲ್ಲಂತೂ ಸ್ಮಾರ್ಟ್‌ಫೋನ್‌ಗಳು ಈ ಸುದ್ದಿಯ ಮೂಲವಾಗಿವೆ. ಮೊಬೈಲ್‌ನಲ್ಲಿ ಯಾವ್ಯಾವುದೋ ಸುದ್ದಿಯ ತಾಣಗಳನ್ನು ಜಾಲಾಡುವುದು ಸಾಮಾನ್ಯ. ಇದಕ್ಕಾಗಿ ಆ್ಯಪಲ್ ನ್ಯೂಸ್ ಎಂಬ ಐಫೋನ್ ಹಾಗೂ ಐಪ್ಯಾಡ್ ಆ್ಯಪ್ ಬಂದಿದೆ. ಇದು ಫೋನ್‌ನಲ್ಲಿ ಮೊದಲೇ ಇನ್‌ಸ್ಟಾಲ್ ಆಗಿರುವ ಆ್ಯಪ್. ಅಂದರೆ ನೀವು ಹೊಸದಾಗಿ ಡೌನ್‌ಲೋಡ್ ಮಾಡಬೇಕಾಗಿಲ್ಲ. ತಜ್ಞರ ತಂಡವೊಂದು ಸುದ್ದಿಗಳನ್ನು ಆಯ್ಕೆ ಮಾಡಿ ಹಾಕಲಿದ್ದು, ಕಂಪೆನಿಯು ಕೆಲವು ಸುದ್ದಿ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ.

## ಟುಡೇ ಇನ್ ಹಿಸ್ಟರಿ

ಇತಿಹಾಸವನ್ನು ಜಾಲಾಡಲು ಇದು ಸೂಕ್ತ ಆ್ಯಪ್. ನೀವು ದಿನಾಂಕವನ್ನು ಆಯ್ಕೆ ಮಾಡಿದರೆ ಅಂದು ನಡೆದ ಪ್ರಮುಖ ಐತಿಹಾಸಿಕ ಘಟನೆಗಳು ಹಾಗೂ ಐತಿಹಾಸಿಕ ವ್ಯಕ್ತಿಗಳ ಜನ್ಮ ದಿನಾಂಕದ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ನಿಮ್ಮ ಫೋನಿನ ಹೋಂಸ್ಕ್ರೀನ್ ಮೇಲೆ ವಿಗೆಟ್ ಸೇರಿಸಿ ತಕ್ಷಣಕ್ಕೆ ಮಾಹಿತಿ ಪಡೆಯಬಹುದು. ಆ್ಯಪ್ ಸಂಪರ್ಕಗಳು ವಿಷಯಕ್ಕೆ ಸಂಬಂಧಿಸಿದಂತೆ ವಿಕಿಪೀಡಿಯಾಗೆ ಸಂಪರ್ಕ ಕಲ್ಪಿಸುತ್ತವೆ. ಆ್ಯಂಡ್ರಾಯ್ಡ್‌ನ ಈ ಆ್ಯಪ್ ಅನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.



## ಖಾನ್ ಅಕಾಡೆಮಿ

KHAN ACADEMY

ಇದು ಬೃಹತ್ ಮಾಹಿತಿ ಹೊಂದಿದ ಗ್ರಂಥಾಲಯದ ಆ್ಯಪ್ ಆಗಿದ್ದು, ವಿದ್ಯಾರ್ಥಿಗಳಿಗೆ ಅನುಕೂಲಕರ. ನಾಲ್ಕು ಸಾವಿರಕ್ಕಿಂತ ಅಧಿಕ ವಿಡಿಯೋ ಪಾಠಗಳು ಲಭ್ಯವಿದ್ದು ಬೀಜಗಣಿತ, ಇತಿಹಾಸ, ಸಂಗೀತ, ಭಾಷೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಮಾಹಿತಿ ಲಭಿಸುತ್ತದೆ. ವಿಡಿಯೋಗಳು ಹಾಗೂ ಆ್ಯಪ್ ಆ್ಯಂಡ್ರಾಯ್ಡ್‌ನಲ್ಲಿ ಉಚಿತ. ಇದನ್ನು ಖಾನ್ ಅಕಾಡೆಮಿ ವೆಬ್ ಲೈಬ್ರರಿ ಹೊರ ತಂದಿದೆ.

■ ಎಸ್. ತುಂಬೆ